M.V.C**.- 25/2016**
**ಪಿ.ಡಬ್ಲ್ಯೂ-1**

**ದಿಃ 19-01-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲ 1 ನೇ ಎದುರುದಾರರ ಪರಃ ಶ್ರೀ ಜಿ. ಪಿ ವಕೀಲರಿಂದಃ**

ನಾನು ಬಿ. ಎ ಓದಿರುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡುತ್ತಿರುತ್ತೇನೆ. ದುರ್ಗಬಾಯಿ ಕೆ. ಎಸ್. ಆರ್. ಟಿ. ಸಿಯಲ್ಲಿ ನಿರ್ವಾಹಕಳಾಗಿ ಕೆಲಸ ಮಾಡುತ್ತಿದ್ದಳು. ಮಲಸಾಸ್ ತೆಗೆದುಕೊಂಡು ಹೋಗುವಂತಹ ಟ್ಯಾಂಕರ್ ಲಾರಿ ಅಪಘಾತ ಪಡಿಸಿರುತ್ತದೆ. ಸದರಿ ಲಾರಿಯ ಚಾಲಕನಿಗೆ ಕಾನೂನು ಬದ್ದವಾದ ಡಿ. ಎಲ್ ಇತ್ತು ಎನ್ನುವುದು ನಿಜ. ಸದರಿ ಲಾರಿಗೆ ವಿಮೆ ಚಾಲ್ತಿಯಲ್ಲಿತ್ತು ಎನ್ನುವುದು ನಿಜ. ವಿಮೆ ಚಾಲ್ತಿಯಲ್ಲಿದ್ದ ಕಾರಣ ಪರಿಹಾರವನ್ನು ವಿಮಾ ಕಂಪನಿಯವರು ಕೊಡಲು ಬಾದ್ಯಸ್ಥರು ಎನ್ನುವುದು ನಿಜ. ನಮ್ಮ ಮನೆತನದ ಜವಬ್ದಾರಿಯನ್ನು ನಾನು ನಿರ್ವಹಿಸುತ್ತಿದ್ದೇನೆ ಎಂದರೆ ಸಾಕ್ಷಿ ಗಂಡ ಹೆಂಡತಿ ಇಬ್ಬರೂ ನಿರ್ವಹಿಸುತ್ತಿದ್ದೆವು ಎಂದು ಹೇಳುತ್ತಾರೆ. ನಾನು ಮಾತ್ರ ಮನೆತನದ ಜವಬ್ದಾರಿಯನ್ನು ನಿರ್ವಹಿಸುತ್ತಿದ್ದು ನನ್ನ ಹೆಂಡತಿ ನಿರ್ವಹಿಸುತ್ತಿಲ್ಲ ಎಂದರೆ ಸರಿಯಲ್ಲ. ಮೋಟರ್ ಸೈಕಲ್ ಚಾಲಕನಾದ ಕರಿಬಸಪ್ಪ ಇವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕೇಸಿಗೆ ಅನುಕೂಲವಾಗಲೆಂದು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಮಾಡಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಪಡಿಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಲಾರಿಯ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸ್ ಇಲಾಖೆಯಲ್ಲಿರುವುದರಿಂದ ನನ್ನ ಪ್ರಭಾವವನ್ನು ಬೀರಿ ಲಾರಿಯ ಚಾಲಕನ ವಿರುದ್ದ ಸುಳ್ಳು ಕೇಸನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**